ಊ) ರಾಜ್ಯದಲ್ಲಿ ಪದವೀಧರ ಪಶುವೈದ್ಯರ ಕೊರತೆಯಿರುವುದರಿಂದ ಹೊಸದಾಗಿ ಪಶುಚಿಕಿತ್ಸಾಲಯಗಳನ್ನು ತೆರೆಯುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

ಋ) ಹೌದು. ರಾಜ್ಯದಲ್ಲಿ ಕಾಲುಬಾಯಿ ಜ್ವರ ನಿಯಂತ್ರಣಕ್ಕೆ ಬಂದಿರುತ್ತದೆ. ಈ ರೋಗ ನಿಯಂತ್ರಣಕ್ಕೆ ವರ್ಷದಲ್ಲಿ ಎರಡು ಭಾರಿ ಜಾನುವಾರಗಳಿಗೆ ಲಸಿಕೆ ಹಾಕುವ ಮುಖಾಂತರ ರೋಗವನ್ನು ನಿಯಂತ್ರಿಸಲಾಗಿತ್ತಿದೆ. ಪ್ರಸ್ತಕ ಸಾಲಿನಲ್ಲಿ ಈಗಾಗಲೇ ರಾಜ್ಯದ್ಯಾಂತ 1,18,23,152 ಜಾನುವಾರುಗಳಿಗೆ ಲಸಿಕೆ ಹಾಕಲಾಗಿದೆ. ಈ ವರ್ಷದ 2ನೇ ಸುತ್ತಿನ ಲಸಿಕಾ ಕಾರ್ಯಕ್ರಮ 15/2/2014 ರಿಂದ 14/02/2014 ರ ವರೆಗೆ ಹಮ್ಮಿಕೊಳ್ಳಲಾಗಿದೆ. ಇದಕ್ಕೆ ಜಾನುವಾರಗಳ ಸಂಖ್ಯೆಗೆ ಅನುಗುಣವಾಗಿ ಅವಶ್ಯಕ ಲಸಿಕೆಗಳನ್ನು ದಾಸ್ತಾನು ಇರಿಸಿಕೊಳ್ಳಲಾಗಿದೆ.

ಆರಕ್ಷಕ ಸಿಬ್ಬಂದಿಗೆ ಹೊಸದಾಗಿ ವಾಹನಗಳನ್ನು ನೀಡುವುದು

433(347); ಶ್ರೀ ಡಾ॥ಉಮೇಶ್ ಜಿ. ಜಾಧವ್

ಅ) ಗುಲ್ಬರ್ಗಾ ಜಿಲ್ಲೆ ಚಿಂಚೊಳ್ಳಿ ತಾಲೂಕಿನ ವ್ಯಾಪ್ತಿಗೆ ಬರುವ ಎಲ್ಲಾ ಆರಕ್ಷಕ ಠಾಣೆಗಳಿಗೆ ಇಲಾಖೆಯಿಂದ ನೀಡಿರುವ ವಾಹನಗಳು ಹಳೆಯದಾಗಿದ್ದು ಇದರಿಂದಾಗಿ ಆರಕ್ಷಕ ಸಿಬ್ಬಂದಿಗಳು ಗಲಾಟೆ, ದೊಂಬಿ, ಅಪಘಾತ, ಕೊಲೆ ನಡೆದ ಸ್ಥಳಗಳಿಗೆ ಸಮಯಕ್ಕೆ ಸರಿಯಾಗಿ ಹೋಗಲು ತೀರಾ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮವೇನು? (ವಿವರ ನೀಡುವುದು)

ಶ್ರೀ ಕೆ. ಜೆ.ಜಾರ್ಜ (ಗೃಹ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪೊಲೀಸ್ ಠಾಣೆಗಳಿಗೆ ವಿವಿಧ ಮಾದರಿಯ ವಾಹನಗಳನ್ನು ಒದಗಿಸಲಾಗಿದೆ. ಸದರಿ ವಾಹನಗಳು ಸುಸ್ಥಿತಿಯಲಿದ್ದು, ದೈನಂದಿನ ಕರ್ತವ್ಯ ನಿರ್ವಹಿಸುತಿರುತ್ತವೆ. ಅಲ್ಲದೇ ಹೆಚ್ಚುವರಿಯಾಗಿ 04 ಸಂಖ್ಯೆಯ ಬೊಲೇರೋ ವಾಹನಗಳನ್ನು ₹23,18,984/–ಗಳಲ್ಲಿ ಖರೀದಿಸಿ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

336 ಕಲ್ಲು ಮತ್ತು ಮಣ್ಣಿನ ರಕ್ಷಣೆ

435(351) ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ)

ಅ) ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ವಿಧಾನಸಭಾ ಕ್ಷೇತ್ರದಲ್ಲಿನ ವಿಶಿಷ್ಟ ಮಣ್ಣಿನ ಹಾಗೂ ಅನಧಿಕೃತ ಕರಿಕಲ್ಲು ಫ್ಯಾಕ್ಟರಿಗಳನ್ನು ತೆರೆಯಲು ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಸುಲೇಪೇಟೆ, ಕೊರವಿ, ಕುಡಹಳ್ಳಿ ಗ್ರಾಮಗಳ ಸೀಮಿತ ವ್ಯಾಪ್ತಿಯಲ್ಲಿ ಫುಲ್ಲರ್ಸ್ ಅರ್ಥ ವಿಶಿಷ್ಟ ಮಣ್ಣಿನ ನಿಕ್ಷೇಪ ಇರುತ್ತದೆ. ಇದು ನಿರ್ದಿಷ್ಟವಲ್ಲದ ಉಪಖನಿಜವಾಗಿದ್ದು, ಇಲಾಖೆ ವತಿಯಂದ ನಿಯಮಾನುಸಾರ ಕಲ್ಲುಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗುತ್ತಿದೆ. ಸದರಿ ಫುಲ್ಲರ್ಸ್ ಅರ್ಥ ವಿಶಿಷ್ಟ ಮಣ್ಣನ್ನು ಉಪಯೋಗ ಮಾಡುತ್ತಿದ್ದು ಸದರಿ ಸಂಸ್ಕರಣ ಘಟಕಗಳಿಗೆ ಕರ್ನಾಟಕ ಪರಿಸರ ನಿಯಂತ್ರಣ ಮಂಡಳಿಯಿಂದ ಅನುಮತಿ ನೀಡಲಾಗುತ್ತಿದೆ. ಹಾಗೂ ತಾಲ್ಲೂಕಿನಲ್ಲಿ ಅನಧೀಕೃತ ವಿಶಿಷ್ಟ ಮಣ್ಣಿನ ಅನಧಿಕೃತ ಗಣಿಗಾರಿಕೆ ಕಂಡು ಬಂದಲ್ಲಿ ನಿಯಾಮನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. ತಾಲ್ಲೂಕಿನಲ್ಲಿ 18 ವಿಶಿಷ್ಟ ಮಣ್ಣಿನ ಚಾಲ್ತಿ ಕಲ್ಲು ಗಣಿ ಗುತ್ತಿಗೆಗಳು ಇರುತ್ತವೆ. (ಅನುಬಂಧ 1 ಲಗತ್ತಿಸಿದೆ) ಗುಲ್ಬರ್ಗಾ ಕಛೇರಿಗೆ ಗಣಿ ಗುತ್ತಿಗೆ ಮಂಜೂರಾತಿ ಕೋರಿ